## ನಕ್ಕುಬಿಡಿ



### ಎರಡೂ ಕಾಣಿಸೋದಿಲ್ಲ!

ಚಿಕನ್ ಬಿರಿಯಾನಿ ಮತ್ತು ಗುಲಾಬ್ ಜಾಮೂನ್ ತಂದಿಟ್ಟ ವೈಟರ್‌ಗೆ ಗುಂಡ 'ಬಿರಿಯಾನಿಲಿ ಚಿಕನ್ ಕಾಣಿಸ್ತಿಲ್ವಲ್ಲ?' ಅಂತ ತಮಾಷೆ ಮಾಡಿದ. ಕಿಲಾಡಿ ವೈಟರ್ 'ಅಷ್ಟೇ ಅಲ್ಲ ಸಾರ್, ಜಾಮೂನಲ್ಲಿ ಗುಲಾಬಿನೂ ಕಾಣಿಸ್ಲಿಲ್ಲ' ಅಂದಾಗ ಗುಂಡ ಸುಸ್ತು!

★★★

### ಎತ್ತರದ ಕುರ್ಚಿ!

ಕಚೇರಿಯೊಂದರಲ್ಲಿ ಮ್ಯಾನೇಜರ್ ಕೆಲಸ ಸಿಕ್ಕಿತು. ದುರದೃಷ್ಟವಶಾತ್ ಅವನು ಕೂರುವ ಕುರ್ಚಿ ಕುಳ್ಳಗಿತ್ತು. ಮೇಲಿನ ಕಚೇರಿಗೆ, ಹೊಸ, ಎತ್ತರದ ಕುರ್ಚಿಗಾಗಿ ಗುಂಡ ಅರ್ಜಿ ಬರೆದ. ಸುಮಾರು ಒಂದು ವರ್ಷ ಎಡಬಿಡದೆ ಪತ್ರ ವ್ಯವಹಾರ ನಡೀತು. ಯಾವ ಕುರ್ಚಿ, ಬಣ್ಣ ಯಾವುದು, ರಿಪೇರಿ ಸಾಧ್ಯವಿಲ್ಲವೇ, ಯಾವುದು ಬೇಕು. ಎಲ್ಲಿಂದ ಕೊಳ್ಳುತ್ತೀರಿ, ಬೆಲೆ ಎಷ್ಟು – ಇತ್ಯಾದಿ ವಿವರಗಳಿಗೆ ನಡೆದ ಬೆಟ್ಟದಷ್ಟು ಪತ್ರ ವ್ಯವಹಾರದ ನಂತರ ಮೇಲಿನ ಅಧಿಕಾರಿ ಗುಂಡನಿಗೆ ಹೊಸ ಕುರ್ಚಿ ಕೊಳ್ಳಲು ಅನುಮತಿ ನೀಡಿದರು. ಅದಕ್ಕೆ ಗುಂಡ ಬರೆದ ಮಾರುತ್ತರ ಹೀಗಿತ್ತು!

'ಹೊಸ ಎತ್ತರದ ಕುರ್ಚಿ ಕೊಳ್ಳಲು ಪರವಾನಗಿ ನೀಡಿದ್ದಕ್ಕೆ ಧನ್ಯವಾದಗಳು. ಆದರೆ ಈ ಬಗ್ಗೆ ನಡೆದ ಪತ್ರ ವ್ಯವಹಾರದ ಫೈಲುಗಳನ್ನು ಹಳೆ ಕುರ್ಚಿ ಮೇಲೆ ಇಟ್ಟುಕೊಂಡು ಕೆಲಸ ಮಾಡಿದ್ದರಿಂದ ಸಹಜವಾಗಿಯೇ ಅದು ಎತ್ತರವಾಗಿದೆ. ಹೊಸದರ ಅಗತ್ಯವಿಲ್ಲ'.

**(ಸಂಗ್ರಹ):ವಾ.ಮುರಳೀಧರ, ತೀರ್ಥಹಳ್ಳಿ**

ಗುಂಡ: ನಮ್ಮ ಬಾಸ್ ಶಿಕ್ಕಾಪಟ್ಟೆ ಸೋಮಾರಿ! ಅವರು ಲಿಫ್ಟ್‌ನಲ್ಲಿ ಹೋಗುವಾಗಲೂ ಸಹಾಯಕ್ಕೆ ಒಬ್ಬರು ಬೇಕು.

ನಾಣಿ: ಯಾಕೆ?

ಗುಂಡ: ಲಿಫ್ಟ್ ಬಟನ್ ಒತ್ತೋಕೆ!

★★★

ಪೊಲೀಸ್: ಸಾರ್ ಬ್ಯಾಂಕ್ ದರೋಡೆ ಆಗಿತ್ತಲ್ಲ. ನಾಯಿಗಳನ್ನು ಕರೆಸಿದರೂ ಪ್ರಯೋಜನವಾಗಲಿಲ್ಲ.

ಅಧಿಕಾರಿ: ಫಿಂಗರ್ ಪ್ರಿಂಟ್ಸ್ ನೋಡಬಾರದಿತ್ತಾ?

ಪೊಲೀಸ್: ಉಹುಂ! ಅದೂ ಉಪಯೋಗಕ್ಕೆ ಬರಲಿಲ್ಲ ಸಾರ್

ಅಧಿಕಾರಿ: ಯಾಕೆ?

ಪೊಲೀಸ್: ಕಳ್ಳ ಬಹಳ ಚಾಣಾಕ್ಷ ಸಾರ್! ಫಿಂಗರ್ ಪ್ರಿಂಟ್ಸ್ ಸಿಗದೇ ಇರಲಿ ಅಂತ ಬ್ಯಾಂಕ್ ತಿಜೋರಿಯನ್ನು ಕಾಲಿನಿಂದ ತೆಗೆದಿದ್ದಾನೆ.

**(ಸಂಗ್ರಹ): ಎಂ.ಕೆ.ಮಂಜುನಾಥ್, ಬೆಂಗಳೂರು**

---

## ಸಮುದ್ರ ಮಥನ




### ಮಾಹಿತಿಪೂರ್ಣ

'ಮರಳಿ ಬಂದಿದೆ ರೇಡಿಯೊ ಯುಗ', ದಿಲಾವರ್ ರಾಮದುರ್ಗ ಅವರ ಮುಖಪುಟ ಲೇಖನ (ಸುಧಾ, ಸೆ. 3) ಮಾಹಿತಿಪೂರ್ಣ. ಅಗ್ಗದ ಮಾಧ್ಯಮ, ಜನರ ಯಾವುದೇ ಕೆಲಸಗಳಿಗೆ ಅಡ್ಡಿ ಮಾಡದೆ ಸಂಗಾತಿಯಂತೆ ಸದಾ ಬಳಿಯಲ್ಲೇ ಇಟ್ಟುಕೊಳ್ಳಬಹುದಾದ ಈ ಶ್ರವಣ ಮಾಧ್ಯಮ ಜನರನ್ನು ತನ್ನತ್ತ ಆಕರ್ಷಿಸುತ್ತಿರುವುದು ನಿಜಕ್ಕೂ ಉತ್ತಮ ಬೆಳವಣಿಗೆ.

-ಸು.ವಿಜಯಲಕ್ಷ್ಮಿ, ಶಿವಮೊಗ್ಗ, ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ, ಬಸವರಾಜ ಹೂಗಾರ ಹಿರೇಸಂಗನಗುತ್ತಿ, ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ, ಬಿ.ಎಸ್. ರಮೇಶ್, ಬೆಂಗಳೂರು, ರಮ್ಯಾ ಬೆಳ್ಳಾವೆ, ರಘುನಾಥರಾವ್ ಥಾಪ್ಸೆ, ಶ್ರೀನಾಥ್ ಕೊನೇಟಿ, ಬೆಂಗಳೂರು, ಆರ್.ಎಸ್.ಲಕ್ಷ್ಮೀಕಾಂತ್, ಬೆಂಗಳೂರು

### ರೇಡಿಯೊ ಪ್ರೇಮಿ

ನನಗೀಗ 74 ವರ್ಷ. ಕಳೆದ ಸುಮಾರು 60 ವರ್ಷಗಳಿಂದ ರೇಡಿಯೊ ತಪ್ಪದೇ ಕೇಳುತ್ತೇನೆ. ಟಿ.ವಿ ಇದ್ದರೂ ನಾನು ಕೇಳುವುದು ರೇಡಿಯೊ ಮಾತ್ರ. ಬೆಳಿಗ್ಗೆ ರೇಡಿಯೊ ಬಿತ್ತರಿಸುವ ದೇವರನಾಮ ಕೇಳಿ ದಿನಚರಿ ಆರಂಭಿಸಿದರೆ ರಾತ್ರಿ 11 ಗಂಟೆಗೆ ಸಮಾಚಾರ ಕೇಳಿಯೇ ರೇಡಿಯೊ ಆರಿಸಿ ಮಲಗುವುದು. ಬಹುಶಃ ನನ್ನಂತೆ ರೇಡಿಯೊ ಪ್ರೇಮಿಗಳು ಸಾವಿರಾರು ಜನರಿರಬಹುದು.

-ಎಚ್.ಆರ್. ದೇಸಾಯಿ, ರಾಯಚೂರು

### ಪ್ರಸ್ತಾಪವೇ ಇಲ್ಲ

ರೇಡಿಯೊ ಕುರಿತ ಬರಹದಲ್ಲಿ ಲೇಖಕರು ಬೆಂಗಳೂರು ಆಕಾಶವಾಣಿ, ವಿವಿಧ ಭಾರತಿ ಎಫ್.ಎಂ. 102.09 ಕಾರ್ಯಕ್ರಮಗಳ ಬಗ್ಗೆ ಪ್ರಸ್ತಾಪವನ್ನೇ ಮಾಡಿಲ್ಲ. ಬೆಂಗಳೂರು ವಿವಿಧ ಭಾರತಿ ಅಪಾರ ಶ್ರೋತೃವೃಂದವನ್ನು ಹೊಂದಿದೆ. ಅಲ್ಲದೆ ಎರಡು ಶ್ರೋತೃ ಸಂಘಗಳೂ ಇವೆ.

-ಎಂ.ಪಿ. ಸ್ವಾಮಿ, ನೆ.ಲ.ರಾಮಮೂರ್ತಿ, ಬೊ.ಪಾ.ವೆಂಕಟೇಶ್, ಬೆಂಗಳೂರು

### ಜಯಮಹಲ್ ಅಲ್ಲ; ಜಯಮಾಲಾ

ವಿವಿಧ ಭಾರತಿ ಕಾರ್ಯಕ್ರಮಗಳ ಬಗ್ಗೆ ಬರೆಯುತ್ತಾ ಲೇಖಕರು 'ಜಯಮಹಲ್' ಎಂದಿದ್ದಾರೆ. ಅದು 'ಜಯಮಾಲಾ' ಕಾರ್ಯಕ್ರಮ. ಸೈನಿಕ ಸೋದರರಿಗಾಗಿಯೇ ಪ್ರಸಾರವಾಗುತ್ತಿದ್ದ ಕಾರ್ಯಕ್ರಮ.

-ಬೆಳ್ಳಾವೆ ರಮೇಶ್, ಮುಕುಂದ ಹೆರಕಲ್ಲ, ಕಲಬುರಗಿ

### ಆರೋಗ್ಯ ಲೇಖನ

'ನಾನು ಮುಂಬಯಿ ವಾಸಿ. ಇತ್ತೀಚೆಗೆ ಮಗುವಾಗಿದೆ. ಊರಿಗೆ ಬಂದಾಗ ಸುಧಾದಲ್ಲಿ 'ಎಳೆಮಕ್ಕಳ ಪೋಷಣೆ; ಹೆತ್ತವರ ಆತಂಕ' (ಡಾ. ಎಂ.ಡಿ. ಸೂರ್ಯಕಾಂತ) ಲೇಖನ ಓದಿದೆ. ಮಗುವಿನ ಆರೈಕೆ ಬಗ್ಗೆ ತಾಯಂದಿರ ಸಣ್ಣಪುಟ್ಟ ಸಂದೇಹಗಳನ್ನೂ ಲೇಖನ ನಿವಾರಿಸಿದೆ.

-ಸುಧಾ ಪ್ರಶಾಂತ ತಾಪ್ಸೆ, ದಾವಣಗೆರೆ

### ಸೊಗಸಾಗಿತ್ತು

'ಹೀಗೊಂದು ದೇವರಕಾಡು' ಚಿತ್ರ ಲೇಖನ (ಗಣಂಗೂರು ನಂಜೇಗೌಡ) . ಸೊಗಸಾಗಿತ್ತು.

-ನಾರಾಯಣಯಾಜಿ ಶಿರಾಲಿ, ಅ.ಪಿ. ಸಿದ್ದೇಗೌಡ, ಅರಳಕುಪ್ಪೆ, ನೆ.ಲ.ರಾಂ, ಬೆಂಗಳೂರು

### ಅರ್ಥಪೂರ್ಣ ವಿಚಾರ ಲಹರಿ

'ಮೂಚಿ' ಅವರ ವಿಚಾರ ಲಹರಿ ಬರಹ ಬಹಳ ಅರ್ಥಪೂರ್ಣವಾಗಿದೆ.

-ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

### ಭಯಾನಕ ನ್ಯೂರೆಂಬರ್ಗ್

'ಇತಿಹಾಸ ಪುಟಗಳಿಂದ ನ್ಯೂರೆಂಬರ್ಗ್' ಪ್ರವಾಸ ಲೇಖನ (ವಿ.ಪ್ರದೀಪ್ ಕುಮಾರ್) ಓದುತ್ತಿದ್ದಂತೆ ಹಿಟ್ಲರನ ಹಿಂಸಕ ಪ್ರವೃತ್ತಿ ತಿಳಿದು ಭಯಾನಕ ಎನಿಸಿತು.

-ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು, ಕೆ.ಶಿವಣ್ಣ ಗೌಡ, ಬಿ.ಸಿ.ರೋಡ್

### ಭೂತದ ಕಥೆ

ಗಂಗಾಧರ ಬೆಳ್ಳಾರೆ ಅವರು ಬರೆದ 'ಭೂತದ ಮನುಷ್ಯ' ಕಥೆ ರೋಚಕ.

-ಎಚ್.ಆನಂದಕುಮಾರ್, ಚಿತ್ರದುರ್ಗ

### ಕಾರ್ಡ್ ಕಥೆ

ಕಾರ್ಡ್ ಕಥೆ 'ವಾಸನೆ' (ಮುದ್ದುವೀರ ಸ್ವಾಮಿ) ನಿಜಕ್ಕೂ ಚಿಂತನೀಯ. ದೊಡ್ಡ ಕಥೆಯ ವಿಸ್ತಾರವನ್ನು ಈ ಚಿಕ್ಕ ಕತೆ ಹಿಡಿದಿಟ್ಟಿದೆ.

-ಸಂತೆಬೆನ್ನೂರು ಫೈಜ್ನಟ್ರಾಜ್

### ಅರ್ಥಗರ್ಭಿತ

'ಪ್ರತಿಸ್ಪಂದನ'ದಲ್ಲಿ ಕವಿತಾ ("ಲಕ್ಷ್ಮೀ ಬಾರಮ್ಮ'ದ ಲಚ್ಚಿ ಪಾತ್ರ) ಅವರ ನಟನೆ, ಪಾತ್ರದ ಬಗ್ಗೆ ನಡೆಸಿದ ಸಂದರ್ಶನ (ರಾಗು) ಅರ್ಥಗರ್ಭಿತವಾಗಿತ್ತು.

-ವೈಷ್ಣವಿ ಶ್ರೀನಿವಾಸ್, ಜಿ.ವಿ. ಪ್ರಭು, ಬೆಂಗಳೂರು

### ಅಚ್ಚರಿ

ವಂಡರ್‌ಪುಟದಲ್ಲಿ 'ಬಾಳೆಹಣ್ಣಿನಲ್ಲಿ ಕಲೆ'ನೋಡಿ ಅಚ್ಚರಿಯಾಯಿತು.

-ಕುಸುಮಾ ಬೆಜ್ಜವಳ್ಳಿ